

## ಮಹಾ ಬಿಲ್ವ

ಹಿಂದೂ ಧರ್ಮದಲ್ಲಿ ‘ಬಿಲ್ವಪತ್ರೆ’ ಮರವನ್ನು ಪವಿತ್ರ ಮರ ಹಾಗೂ ಶಿವನಿಗೆ ಅತ್ಯಂತ ಪ್ರಿಯವಾದದ್ದು ಎಂದು ಪರಿಗಣಿಸಲಾಗಿದೆ. ಬಿಲ್ವ ಪತ್ರೆಯಿಂದ ಪೂಜಿಸಿದರೆ ಶಿವ, ಭಕ್ತರಿಗೆ ಒಲಿಯುತ್ತಾನೆಂದು ನಂಬಲಾಗಿದೆ. ಬಿಲ್ವಪತ್ರೆ ಮತ್ತು ಕಾಯಿಗಳು ಔಷಧೀಯ ಗುಣಗಳನ್ನು ಹೊಂದಿದ್ದು, ಅನೇಕ ರೋಗಗಳನ್ನು ಗುಣಪಡಿಸಲು ಆಯುರ್ವೇದ ಚಿಕಿತ್ಸಾ ಪದ್ಧತಿಯಲ್ಲಿ ಉಪಯೋಗಿಸುತ್ತಾರೆ.

ಒಂದು ಕಾಂಡದಲ್ಲಿ ಮೂರು ದಳಗಳುಳ್ಳ ಬಿಲ್ವಪತ್ರೆ ಎಲ್ಲೆಡೆ ಕಾಣಸಿಗುತ್ತವೆ ಮತ್ತು ಎಲೆಗಳು ಅಗಲವಾಗಿರುತ್ತವೆ. ಮೂರಕ್ಕಿಂತಲೂ ಅಧಿಕ ದಳಗಳುಳ್ಳ ಬಿಲ್ವಪತ್ರೆಯನ್ನು ‘ಮಹಾ ಬಿಲ್ವ’ ಎಂದು ಕರೆಯುತ್ತಾರೆ. ಇದು ಅಪರೂಪದ ಮರ. ಬಳ್ಳಾರಿಯ ‘ಕುಮಾರಸ್ವಾಮಿ’ ದೇವಾಲಯಕ್ಕೆ ಹೋಗಿದ್ದಾಗ ಸಮೀಪದಲ್ಲೇ ಇರುವ ಸುಬ್ಬರಾಯನ ಹಳ್ಳಿಯಲ್ಲಿ 13 ದಳಗಳ ಬಿಲ್ವಪತ್ರೆ ಮರ ಕಾಣಿಸಿತು. ಮಾಮೂಲಿ ಬಿಲ್ವಪತ್ರೆಗಿಂತಲೂ ಮಹಾ ಬಿಲ್ವದ ಎಲೆಗಳು ಚಿಕ್ಕದಾಗಿರುತ್ತವೆ. 13 ದಳಗಳ ಬಿಲ್ವಪತ್ರೆ ಹೆಚ್ಚು ಧನಾತ್ಮಕ ಕಂಪನಗಳನ್ನು ಹೊರಸೂಸುವುದರಿಂದ ಆಧ್ಯಾತ್ಮಿಕವಾಗಿ ಹೆಚ್ಚು ಮಹತ್ವವುಳ್ಳದ್ದಾಗಿದೆ.

—ಜಿ.ಪದ್ಮಾ, ಸಂಡೂರು

## ಅಪರೂಪದ ಪಣೆ ಮರ

ಈ ವಿಶಿಷ್ಟ ವೃಕ್ಷವು ತಾಳೆಮರ ಪ್ರಭೇದಕ್ಕೆ ಸೇರಿದ್ದು ತುಳುಭಾಷೆಯಲ್ಲಿ ‘ಪಣೆಮರ’ ಅಥವಾ ‘ಪನೊಲಿದ ಮರ’ವೆಂದು ಕರೆಯಲಾಗುತ್ತದೆ. ಕನ್ನಡದಲ್ಲಿ ಶ್ರೀ ತಾಳೀ ಮರ ಅಥವಾ ಪನ್ನೆಮರವೆಂಬ ಹೆಸರನ್ನು ಹೊಂದಿದೆ. ಆಂಗ್ಲ ಭಾಷೆಯಲ್ಲಿ ‘ತಾಲಿಪಾಟ್ ಪಾಮ್’ ಎಂಬ ಹೆಸರಿದ್ದು, ಇದರ ವೈಜ್ಞಾನಿಕ ಹೆಸರು ಕೊರಿಫಾ ಉಂಬ್ರಾಕ್ಯುಲಿಫೆರಾ (**Corypha Umbraculifera**). ಇದು ಅರಕೇಷಿಯಾ ಸಸ್ಯ ಕುಟುಂಬಕ್ಕೆ ಸೇರಿದೆ. ಈ ಮರವು ನೂರಾರು ಅಡಿ ಉದ್ದಕ್ಕೂ ಬೆಳೆಯಬಲ್ಲದು. ಸುಮಾರು 60 ವರ್ಷ ಬಾಳುವ ಈ ಮರದ ಕಾಂಡದ ವ್ಯಾಸ ಮೂರಡಿಗಳಷ್ಟಿದೆ. ಸುಮಾರು 130 ಪರ್ಣಕಗಳನ್ನೊಳಗೊಂಡ ನಾಲ್ಕೈದಡಿ ವ್ಯಾಸ/ಅಗಲದ ಹಸ್ತಾಕಾರದ ಸಂಯುಕ್ತ ಎಲೆಗಳನ್ನು ಹೊಂದಿರುತ್ತದೆ. ಎಲೆಯ ತೊಟ್ಟು 10–12 ಅಡಿಗಳಷ್ಟು ಉದ್ದವಿರುತ್ತದೆ.

ಏಕ ಪೈರು ವೃಕ್ಷವಾದ ಈ ಮರವು ತನ್ನ 30ರಿಂದ 80 ವರ್ಷಗಳ ಆಯುಷ್ಯದ ಕೊನೆಯಲ್ಲಿ ಒಮ್ಮೆ ಮಾತ್ರ ಹೂ ಬಿಡುತ್ತದೆ. ಬಾಳೆಗೊನೆಯಂತೆ ಮರದ ತುದಿಯಿಂದ, ಹತ್ತು ಲಕ್ಷಗಳಿಗೂ ಅಧಿಕ ಪುಟ್ಟಪುಟ್ಟ ಹೂವುಗಳ ಗೊಂಚಲು ಗೊಂಚಲಾಗಿ ಹೊರಬರುತ್ತವೆ. ಹೂಗೊಂಚಲಿನ ಗಾತ್ರ ಅದೆಷ್ಟು ಬೃಹತ್ತಾಗಿದೆಯೆಂದರೆ, ಹಲವಾರು ರೆಂಬೆಗಳನ್ನು ಹೊಂದಿರುವ ಹೂವಿನ ದಂಟಿನ ಉದ್ದವು ಸುಮಾರು 20 ಅಡಿಗಳಷ್ಟಿರುತ್ತದೆ. ಮರದ ತುದಿ ತುಂಬಾ ಹೂವರಳಿ ಕಂಗೊಳಿಸುವ ದೃಶ್ಯ ನಯನಮನೋಹರ. ಪುಷ್ಪವರಳಿ ಕಾಯಾಗಿ ಹಣ್ಣುಗಳ ಫಸಲು ದೊರೆಯಲು ಒಂದು ವರ್ಷ ಬೇಕಾಗುತ್ತದೆ. ಅಡಿಕೆಯಂತೆ ಮೂರ್ನಾಲ್ಕು ಸೆ.ಮೀ. ವ್ಯಾಸದ ಗಾತ್ರ ಮತ್ತು ಏಕಬೀಜ ಹೊಂದಿರುವ ದುಂಡಗಿನ, ಹಳದಿ ಹಸುರು ಹಣ್ಣುಗಳು 2ರಿಂದ 3 ಲಕ್ಷಗಳಷ್ಟು ಬೃಹತ್ ಸಂಖ್ಯೆಯಲ್ಲಿರುತ್ತವೆ. ದುರಂತವೆಂದರೆ ಫಲ ನೀಡಿದ ಬಳಿಕ ವೃಕ್ಷ ಸ್ವಾಭಾವಿಕ ಸಾವನ್ನಪ್ಪಿ ನಶಿಸುತ್ತದೆ.

—ರಮಣ್ ಶೆಟ್ಟಿ ರೆಂಜಾಳ್, ಮುಂಬೈ

